**ದಿನಾಂಕ: 03-10-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

1. ನಾನು ಶಿಕ್ಷಕಿಯಾಗಿ ಖಾಸಗಿ ಶಾಲೆಯಾದ ಜ್ಞಾನಭಾರತಿ ಹಿರಿಯ ಪ್ರಾಥಮಿಕ ಶಾಲೆ ಯಡ್ರಾಮಿಯಲ್ಲಿ 5 ವರ್ಷಗಳವರೆಗೆ ಕೆಲಸ ಮಾಡಿರುತ್ತೇನೆ. ಈಗ ಮನೆಯಲ್ಲೇ ಇರುತ್ತಿದ್ದೇನೆ. ನೀವು ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಬಗಗೆ ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಶಾಲೆಯನ್ನು ಯಾವ ಕಾರಣಕ್ಕೆ ಬಿಟ್ಟಿದ್ದೀರಿ ಎಂದು ಅರ್ಜಿ ಏನಾದರೂ ಇದೆಯಾ ಎಂದರೆ ಅಪಘಾತ ಆದ ನಂತರ ಶಾಲೆ ಬಿಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ಈಗಲೂ ಸಹ ನೀವು ಸದರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹ ಬಿಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಶಾಲೆಯಲ್ಲಿ ಎಷ್ಟು ಸಂಬಳ ಇತ್ತು ಎಂದರೆ ರೂ.10,000/- ಎಂದು ಉತ್ತರಿಸುತ್ತಾರೆ. ನಿಮಗೆ ಸಂಬಳವನ್ನು ಕೊಡುತ್ತಿರುವ ಬಗ್ಗೆ ರಿಜಿಸ್ಟರ್ ಏನಾದರೂ ಇಟ್ಟಿದ್ದರಾ ಎಂದರೆ ಇಟ್ಟಿದ್ದರು ಎಂದು ಉತ್ತರಿಸುತ್ತಾರೆ. ರೂ.10,000/- ಸಂಬಳ ಪಡೆಯುತ್ತಿದ್ದೀರಿ ಎಂದು ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

2. ಅಪಘಾತವಾದ ಸಮಯದಲ್ಲಿ ನನ್ನ ವಯಸ್ಸು 25 ರಿಂದ 26 ವರ್ಷ ಇತ್ತು. ನಿಮ್ಮ ವಯಸ್ಸು ತೋರಿಸಲು ಆಧಾರ್ ಕಾರ್ಡ್ ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ವಯಸ್ಸು ಹೆಚ್ಚಿಗೆ ಇದ್ದರೂ ಸಹ ನಿಮಗೆ 25 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಪಘಾತವು ಯಾವ ವರ್ಷದಲ್ಲಿ ಆಗಿದೆ ಎಂದರೆ 2 ವರ್ಷ ಆಗಿದೆ ಎಂದು ಉತ್ತರಿಸುತ್ತಾರೆ. ದಿನಾಂಕ 06-05-2022 ಕ್ಕೆ ಅಪಘಾತ ಆಗಿದೆ ಎಂದರೆ ಸರಿ. ಅಪಘಾತವಾದ ದಿನ ನೀವು ಎಲ್ಲಿಗೆ ಹೋಗುತ್ತಿದ್ದೀರಿ ಎಂದರೆ ನಾನು ಹೊಲಕ್ಕೆ ಹೋಗಿ ಬರುವ ಸಮಯದಲ್ಲಿ ಅಪಘಾತ

ಆಗಿರುತ್ತದೆ. ಅಪಘಾತವಾದ ಸಮಯದಲ್ಲಿ ನನ್ನ ತಮ್ಮ ಸಾಹೇಬಗೌಡನಿದ್ದನು. ಅಪಘಾತವಾದಾಗ ಎಷ್ಟು ಸಮಯ ಆಗಿತ್ತು ಎಂದರೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವು ಯಾವ ರೀತಿ ಆಯಿತು ಎಂದರೆ ನಾವು ನಡೆದುಕೊಂಡು ಹೋಗುತ್ತಿದ್ದಾಗ ಮೋಟಾರ್ ಸೈಕಲ್ ಬಂದು ಡಿಕ್ಕಿಪಡಿಸಿರುತ್ತದೆ. ಸದರಿ ಮೋಟಾರ್ ಸೈಕಲ್ ನಮ್ಮ ಎದುರಿನಿಂದ ಬಂದಿರುತ್ತದೆ. ಅಪಘಾತವಾದ ವಿಚಾರವಾಗಿ ನನ್ನ ತಮ್ಮ ಆಸ್ಪತ್ರೆಯಲ್ಲಿದ್ದಾಗ ದೂರನ್ನು ನೀಡಿರುತ್ತಾನೆ. ಅಪಘಾತವಾದ 4-5 ದಿನಗಳ ನಂತರ ದೂರು ನೀಡಿರುತ್ತಾರೆ. ದೂರಿನಲ್ಲಿ ಬರೆಸಿರುವ ವಿಚಾರ ಸರಿ ಇದೆಯೇ ಎಂದರೆ ಸರಿ ಇದೆ ಎಂದು ಉತ್ತರಿಸುತ್ತಾರೆ. ದೂರನ್ನು ನೀಡುವ ಸಮಯದಲ್ಲಿ ಯಾರ ಮೇಲೆ ದೂರನ್ನು ನೀಡಬೇಕು ಎಂದು ಗೊತ್ತಿದ್ದಿಲ್ಲ ಅದೇ ತರಹ ದೂರನ್ನು ಬರೆಸಿದ್ದೀರಿ ಎಂದರೆ ಸರಿ.

3. ಅಪಘಾತವಾದ ನಂತರ ಕುರಾಳ ಆಸ್ಪತ್ರೆಗ ಹೋಗಿರುತ್ತೇವೆ. ಅಪಘಾತದಲ್ಲಿ ನನ್ನ ಬಲಗಾಲು ಮುರಿದಿತ್ತು ರಾಡು ಹಾಕಿರುತ್ತಾರೆ. ಕುರಾಳ ಆಸ್ಪತ್ರೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಅಪಘಾತವಾದ ನಂತರ ಹೋಗಿರುತ್ತೇವೆ ಎಂದು ಉತ್ತರಿಸುತ್ತಾರೆ. ಅಪಘಾತವಾದ ಸ್ಥಳದಿಂದ ಕುರಾಳ ಆಸ್ಪತ್ರೆ ಎಷ್ಟು ದೂರ ಇದೆ ಎಂದರೆ ಒಂದು ಒಂದೂವರೆ ತಾಸು ದೂರ ಆಗುತ್ತದೆ. ನಿಮ್ಮ ದೂರಿನಲ್ಲಿ ಅಪಘಾತ ಸಂಜೆ 5 ಗಂಟೆಗೆ ಆಗಿದೆ ಎಂದು ಬರೆಸಿದ್ದೀರಿ ಆಸ್ಪತ್ರೆಯವರು ಸಂಜೆ 5 ಗಂಟೆಗೆ ನೋಡಿರುತ್ತಾರೆ ಎಂದರೆ 4 ಗಂಟೆಗೆ ಅಪಘಾತ ಆಗಿರಬಹುದು ಆಸ್ಪತ್ರೆಗೆ ಹೋದಾಗ ಸಂಜೆ 5 ಗಂಟೆ ಆಗಿರಬಹುದು ನನಗೆ ಪ್ರಜ್ಞೆ ತಪ್ಪಿತ್ತು ಎಂದು ಉತ್ತರಿಸುತ್ತಾರೆ. ಅಪಘಾತವಾಗಿದೆ ಎಂದು ಸುಳ್ಳು ಹೇಳಿ ಬರೆಸಿರುತ್ತೀರಿ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನಂ.ಕೆಎ-32 ಇಡಬ್ಲು-7477ನೇದ್ದರ ಚಾಲಕನ ತಪ್ಪಿ ನಿಂದ ಅಪಘಾವಾಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮತ್ತು ಪೊಲೀಸರು 5 ದಿನಗಳವರೆಗೆ ವಿಚಾರ ಮಾಡಿ ನೀವು , ಪೊಲೀಸರು ಮತ್ತು ದ್ವಿ-ಚಕ್ರ ವಾಹನದ ಮಾಲೀಕರು ಶಾಮೀಲಾಗಿ ಮೋಟಾರ್ ಸೈಕಲ್ ನಂ.ಕೆಎ-32 ಇಡಬ್ಲು-

7477ನೇದ್ದರ ಮೇಲೆ ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನಂ.ಕೆಎ-32 ಇಡಬ್ಲು-7477ನೇದ್ದರ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಸುಳ್ಳು ಕೇಸು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನಂ.ಕೆಎ-32 ಇಡಬ್ಲು-7477ನೇದ್ದರ ಮಾಲೀಕರು ನಿಮ್ಮ ಸಂಬಂಧಿಕರಾಗಬೇಕು ಎಂದರೆ ದೂರದ ಸಂಬಂಧಿಕರು ಇರಬಹುದು ಎಂದು ಉತ್ತರಿಸುತ್ತಾರೆ.

4. ಕುರಾಳ ಆಸ್ಪತ್ರೆಯಲ್ಲಿ 5 ದಿನ ಇದ್ದೆನು. ಎಷ್ಟು ಖರ್ಚು ಆಗಿದೆ ಎಂದರೆ ಗೊತ್ತಿಲ್ಲ. ಅಪಘಾತವಾಗಿ 3 ವರ್ಷ ಆಗಿದ್ದರಿಂದ ಎಲ್ಲಾ ಗಾಯಗಳು ವಾಸಿಯಾಗಿದೆ ಮತ್ತು ಮೊದಲಿನಂತೆ ಕೆಲಸ ಮಾಡುತ್ತಿದ್ದೀರಿ ಎಂದರೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ವೈದ್ಯರಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಈ ಕೇಸಿಗಾಗಿ ವೈದ್ಯಕೀಯ ಚೀಟಿ ಮತ್ತು ಬಿಲ್ಲುಗಳನ್ನು ಸೃಷ್ಠಿ ಮಾಡಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತುತ ದ್ವಿ-ಚಕ್ರ ವಾಹನಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ದ್ವಿ-ಚಕ್ರ ವಾಹನದ ಮಾಲೀಕರು ದೂರದ ಸಂಬಂಧಿಕರಾದ ಕಾರಣ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ